**ಸಿ.ಸಿ.ನಂ.: 1041/2023**

ಪಿ.ಡಬ್ಲ್ಯೂ:1

(ಇಂದು ದಿನಾಂಕಃ **17–02–2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲು –ಆರೋಪಿ ಪರ ಶ್ರೀ. P.S.N. ವಕೀಲರಿಂದ**

1. ಸಾಲಕ್ಕಾಗಿ ಅರ್ಜಿ ಬಂದಂತಹ ಸಂದರ್ಭದಲ್ಲಿ ಸದ್ರಿ ಅರ್ಜಿಯನ್ನು ಪರೀಲಿಸುವ ಅಧಿಕಾರವನ್ನು ನಾನೇ ಹೊಂದಿರುತ್ತೇನೆ. ಸಾಲದ ಉಪ ಸಮಿತಿಯು ನಮ್ಮ ಫಿರ್ಯಾದಿ ಸಂಸ್ಥೆಯಲ್ಲಿ ಎರಡು ತಿಂಗಳಿಗೆ ಒಂದು ಬಾರಿ ನಡೆಯುತ್ತದೆ. ಸಾಲದ ಉಪ ಸಮಿತಿಯಲ್ಲಿ 5 ಜನ ಸದಸ್ಯರು ಇರುತ್ತಾರೆ. ಸಾಲದ ಉಪ ಸಮಿತಿಯ ಮಂಡಳಿಯ ಸದಸ್ಯರಿಗೆ ಸದ್ರಿ ಸಭೆಯ ಪೂರ್ವದಲ್ಲಿ ಒಂದು ವಾರದ ನೋಟಿಸನ್ನು ನೀಡಬೇಕು. ಸಾಲದ ಉಪ ಸಮಿತಿಯಲ್ಲಿ ನಾವು ಸಾಲಕ್ಕೆ ಸಂಬಂಧಿಸಿದ ನ್ಯಾಯಾಲಯದಲ್ಲಿ ಹಾಜರುಪಡಿಸಿದ ಎಲ್ಲಾ ದಾಖಲಾತಿಗಳನ್ನು ಸದ್ರಿ ಉಪ ಸಮಿತಿಯ ಮುಂದೆ ಇಡುತ್ತೇವೆ. ಸಾಲದ ಉಪ ಸಮಿತಿಯಲ್ಲಿ ಕೆಲವೊಂದು ಅರ್ಜಿಗಳು ತಿರಸ್ಕತಗೊಳ್ಳುತ್ತವೆ. ಯಾವುದೇ ಸಾಲ ಮಂಜೂರಾಗದೇ ಇದ್ದಲ್ಲಿ ಅಥವಾ ಮಂಜೂರಾದಲ್ಲಿ ಸಾಲದ ಉಪ ಸಮಿತಿಯ ಠರಾವಿನಲ್ಲಿ ಈ ಕುರಿತಾಗಿ ನಮೂದಿಸುತ್ತೇವೆ ಎಂದರೆ ಸರಿ. ಸಾಲದ ಉಪ ಸಮಿತಿಯ ಠರಾವಿನಲ್ಲಿ ಎಷ್ಟು ಸಾಲಗಳು ಮಂಜೂರಾಗಿದೆ ಹಾಗೂ ಎಷ್ಟು ಸಾಲಗಳು ತೀರಸ್ಕತಗೊಳ್ಳುತ್ತದೆ ಎಂಬ ಬಗ್ಗೆ ಲಿಖಿತವಾಗಿ ಶಾಖಾ ವ್ಯವಸ್ಥಾಪಕರಿಗೆ ನೀಡುತ್ತಾರೆ ಎಂದರೆ ಸಾಕ್ಷಿಯು ಸದ್ರಿ ಸಾಲದ ಉಪ ಸಮಿತಿಯ ಠರಾವಿನಲ್ಲಿ ಈ ಕುರಿತಾಗಿ ನಮೂದು ಮಾಡುತ್ತಾರೆ ಎಂದು ನುಡಿಯುತ್ತಾರೆದಿ

2. ಸಾಮಾನ್ಯವಾಗಿ ಸಾಲ ಮಂಜೂರಾದ ಹಾಗೂ ತೀರಸ್ಕತಗೊಂಡ ಸಮಯದಲ್ಲಿ ಈ ಕುರಿತಾಗಿ ನಾವು ಸದ್ರಿ ಅರ್ಜಿದಾರರಿಗೆ ತಿಳಿಸುತ್ತೇವೆ. ಮಂಜೂರಾದ ಸಾಲದ ಅರ್ಜಿಗಳು ಹಾಗೂ ತಿರಸ್ಕತಗೊಂಡ ಸಾಲದ ಅರ್ಜಿಗಳು ಎಲ್ಲಾ ದಾಖಲಾತಿಗಳೊಂದಿಗೆ ನಮ್ಮ ಫಿರ್ಯಾದಿ ಸಂಸ್ಥೆಯಲ್ಲಿ ಇರುತ್ತದೆ.

3. ಈ ಪ್ರಕರಣದ ಸಾಲವು ಮಂಜೂರಾಗಿದೆ ಎಂಬುವುದನ್ನು ತಿಳಿಸಲು ನ್ಯಾಯಾಲಯಕ್ಕೆ ಯಾವುದೇ ಠರಾವ ಪ್ರತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಈ ಪ್ರಕರಣದಲ್ಲಿ ಸಾಲವು ಮಂಜೂರಾಗಿದೆ ಎಂಬುವುದನ್ನು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಕಛೇರಿಯ ಟಿಪ್ಪಣೆಯಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಸದ್ರಿ ಕಛೇರಿಯ ಟಿಪ್ಪಣೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ.

4. ನಮ್ಮ ಶಾಖೆಯಲ್ಲಿ ಒಟ್ಟೂ 5 ಜನ ಸಿಬ್ಬಂದಿಗಳು ಇದ್ದಾರೆ. ಈ 5 ಜನರಲ್ಲಿ ಇಬ್ಬರು ಪಿಗ್ಮಿ ಸಂಗ್ರಹಿಸುತ್ತಾರೆ. ಒಬ್ಬರು ಅಟೆಂಡರ್ ಆಗಿರುತ್ತಾರೆ. ನಮ್ಮ ಶಾಖೆಗೆ ಸಂಬಂಧಿಸಿದಂತೆ ಯಾವುದೇ ದಾಖಲಾತಿಗಳನ್ನು ತಯಾರಿಸುವ ಅಧಿಕಾರ ನಾನೇ ಹೊಂದಿರುತ್ತೇನೆ. ಈ ಪ್ರಕರಣದಲ್ಲಿ ಯಾವುದೇ ಸಾಲ ಮಂಜೂರಾಗದೇ ಇರುವುದರಿಂದ ಯಾವುದೇ ಕಛೇರಿ ಟಿಪ್ಪಣೆಯನ್ನು ಹಾಗೂ ಠರಾವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಒಂದಾನುವೇಳೆ ಸದ್ರಿ ದಾಖಲಾತಿಗಳು ನಮ್ಮ ಬಳಿ ಇದ್ದರೆ ಅವುಗಳನ್ನು ನಾವು ನ್ಯಾಯಾಲಯದಲ್ಲಿ ಹಾಜರುಪಡಿಸುತ್ತಿದ್ದೇವು ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು ಮುಂದೆ ಅವಶ್ಯಕತೆ ಬಿದ್ದರೆ ಸದ್ರಿ ದಾಖಲಾತಿಗಳನ್ನು ಹಾಜರುಪಡಿಸಲು ಬದ್ದನಿದ್ದೇನೆ ಎಂದು ನುಡಿಯುತ್ತಾರೆ.

**ಸಿ.ಸಿ.ನಂ.**: 1041/2023

ಪಿ.ಡಬ್ಲ್ಯೂ: 1

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆ.ಪ್ರ.ದ.ನ್ಯಾ.ದಂ. ಕುಮಟಾ